# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್.ಸಿ. 264/2023

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಮಹೇಶ | | ಪ್ರಮಾಣ ಮಾಡಿಸಿದ ದಿನಾಂಕಃ |
| **ತಂದೆ/ಗಂಡನ ಹೆಸರು** | ಃ ಶ್ರೀ ಮಂಜುನಾಥ | | **13.08.2024** |
| **ವಯಸ್ಸು** | ಃ **24** ವರ್ಷ | | |
| **ವೃತ್ತಿ** | ಃ ಫ್ಯಾಕ್ಟರಿ ಕೆಲಸ | **ಪ್ರಾ.ಸಾ.** | ಃ **04** |
| **ವಾಸಸ್ಥಳ** | ಃ ಬೆಲವತ್ತ ಗ್ರಾಮ | **ಚಾ.ಸಾ.** | ಃ **05** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಈಗ *1* ವರೆ ವರ್ಷಗಳ ಹಿಂದೆ ಒಂದು ದಿನ ನನ್ನ ಮೊಬೈಲ್ ಕಳ್ಳತನವಾಗಿದ್ದಕ್ಕೆ ಪೋಲೀಸ್ ಠಾಣೆಗೆ ಹೋಗಿದ್ದೆ ಆ ಕಾಲಕ್ಕೆ ನನ್ನ ಸಹಿ ಪಡೆದಿದ್ದರು. ಈಗ ನಾನು ನೋಡುತ್ತಿರುವ ನಿ.ಪಿ-*10* ಮಹಜರ್ ಮೇಲಿನ ಸಹಿಯನ್ನು ಆ ಕಾಲಕ್ಕೆ ಮಾಡಿದ್ದೆ. ಸದರಿ ಸಹಿಯನ್ನು ನಿ.ಪಿ-*10(ಬಿ)* ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ನೋಟಿಸ್ ಮೇಲೆ ಸಹ ಅದೇಕಾಲಕ್ಕೆ ಸಹಿ ಮಾಡಿದ್ದೆ. ಸದರಿ ನೋಟಿಸ್ ಅನ್ನು ನಿ.ಪಿ-*12* ಮತ್ತು ಸಹಿಯನ್ನು ನಿ.ಪಿ-*12(ಎ)* ಎಂದು ಗುರುತಿಸಿದೆ. ಆ ಕಾಲಕ್ಕೆ ಕೋರ್ಟ್ ಮುಂದೆ ಇರುವ ಆರೋಪಿತನನ್ನು ನನಗೆ ತೋರಿಸಿರಲಿಲ್ಲ. ಆ ಕಾಲಕ್ಕೆ ಈಗ ನಾನು ನೋಡುತ್ತಿರುವ ಎಂ.ಒ *12* ಮತ್ತು *13* ಎಂದು ಗುರುತಿಸಿರುವ ಬ್ಯಾಗ್ ಮತ್ತು ಶರ್ಟ್ ಅನ್ನು ತೋರಿಸಿರಲಿಲ್ಲ.

***<u>ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.</u>***

***<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>***

*2.* ದಿಃ*15.07.2023* ರಂದು ನನಗೆ ನಿ.ಪಿ-*12* ರಂತೆ ಮಹಜರ್ ಗೆ ಬರುವಂತೆ ನೋಟಿಸ್ ಕೊಟ್ಟಿದ್ದರು ಮತ್ತು ಅದೇ ದಿನ ರಾತ್ರಿ *9.45* ರಿಂದ *10.15* ರ ಸಮಯದಲ್ಲಿ ನನ್ನ ಸಮಕ್ಷಮ ಮೇಟಗಳ್ಳಿ ಪೋಲೀಸ್ ಠಾಣೆಯಲ್ಲಿ ಮಹಜರ್ ಮಾಡಿದ್ದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ಈಗ ಕೋರ್ಟ್ ಮುಂದೆ ಇರುವ ಆರೋಪಿತ ಹಾಜರುಪಡಿಸಿದ್ದ ಈಗ ನಾನು ನೋಡುತ್ತಿರುವ ಎಂ.ಒ *12* ಮತ್ತು *13* ಎಂದು ಗುರುತಿಸಿರುವ ಬ್ಯಾಗ್ ಮತ್ತು ಶರ್ಟ್ ಅನ್ನು ಅಮಾನತ್ತು ಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ನಿ.ಪಿ*10* ರಂತೆ ಮಹಜರ್ ಬರೆದು ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಈಗ ಆರೋಪಿತನೊಂದಿಗೆ ಶಾಮೀಲಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಈ ದಿವಸ ------ ನೀಡಿರುತ್ತೇನೆ ಎಂದು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ-*13* ಎಂದು ಗುರುತಿಸಿದೆ.

<u>ಪಾಟೀ ಸವಾಲು : ಆರೋಪಿ ಪರ ವಕೀಲರವರಿಂದಃ- ಇಲ್ಲ</u>

<u>ಮರು ವಿಚಾರಣೆಃ- ಇಲ್ಲ.</u>

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು